ಚಟುವಟಿಕೆ: 1 ಕೇಳೋಣ ಹೇಳೋಣ

ಅಭ್ಯಾಸ 1.1 ಕಥೆಯನ್ನು ಓದಿ ಉತ್ತರಿಸೋಣ.

| | |
|---|---|
| ಒಂದು ಊರಿನಲ್ಲಿ ಕೇಶವ ಮತ್ತು ಮಾಧವ ಎಂಬ ಇಬ್ಬರು ಗೆಳೆಯರು ಒಂದು ದಿನ ದಾರಿಯಲ್ಲಿ ನಡೆದುಕೊಂಡು ಹೋಗುವಾಗ ಕೇಶವ ಒಂದು ಗಿಡವನ್ನು ನೋಡಿ ಮುಂದೆ ಈ ಗಿಡ ಏನಾಗಬಹುದು? ಎಂದು ಪ್ರಶ್ನಿಸಿದನು. ಅದಕ್ಕೆ ಮಾಧವ ಇದು ಬೆಳೆದು ದೊಡ್ಡಮರವಾಗಿ ಹಣ್ಣು ಕೊಡುತ್ತದೆ, ನೆರಳು ಕೊಡುತ್ತದೆ, ಗಾಳಿಯನ್ನು ಕೊಡುತ್ತದೆ ಎಂದು ಆ ಗಿಡವನ್ನು ಮೃದುವಾಗಿ ಸವರಿದನು. |  |
| ತಕ್ಷಣವೇ ಕೇಶವ ಆ ಗಿಡವನ್ನು ಕಿತ್ತು ಬಿಸಾಕಿ ಈಗ ಹೇಳು ಏನಾಗುತ್ತದೆ? ಎಂದು ಹಾಸ್ಯ ಮಾಡಿದನು. ಮಾಧವ ಏನು ಮಾತನಾಡದೇ ಸುಮ್ಮನೆ ನಕ್ಕು ಮುಂದೆ ಸಾಗಿದ. |  |
| ಸ್ವಲ್ಪ ದಿನಗಳ ನಂತರ ಮಾಧವ ಮತ್ತು ಕೇಶವ ಅದೇ ದಾರಿಯಲ್ಲಿ ಮರಳಿ ಬರುವಾಗ ಕೇಶವ ಕಿತ್ತು ಬಿಸಾಡಿದ್ದ ಗಿಡ ಬೆಳೆದು ನಿಂತಿರುತ್ತದೆ. ಇದನ್ನು ಗಮನಿಸಿದ ಕೇಶವ ಆಶ್ಚರ್ಯಚಕಿತನಾಗಿ ಇದು ಹೇಗೆ ಸಾಧ್ಯ? ಎಂದು ಮಾಧವನನ್ನು ಪ್ರಶ್ನಿಸುತ್ತಾನೆ. |  |

LIVEWORKSHEETS

| | |
|---|---|
| ಆಗ ಮಾಧವ "ನೋಡು ನೀನು ಗಿಡವನ್ನು ಕಿತ್ತು ಬಿಸಾಕಿದ್ದೆ. ಆದರೆ ನಾವು ಮುಂದೆ ಹೋದ ನಂತರ ದಾರಿಯಲ್ಲಿ ಬರುವ ಯಾರೋ ಪುಣ್ಯಾತ್ಮರು ಮತ್ತೆ ಈ ಗಿಡವನ್ನು ನೆಟ್ಟಿರಬೇಕು. ಮಳೆ ಬಂದಾಗ ಮತ್ತೆ ಚಿಗುರಿದೆ ಮತ್ತೆ ಇನ್ನು ಯಾವತ್ತು ಗಿಡವನ್ನು ಕೀಳುವ ಪ್ರಯತ್ನಮಾಡಬೇಡ" ಎಂದು ಬುದ್ಧಿವಾದ ಹೇಳಿದನು. |  |

1) ಈ ಕಥೆಯಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ಮತ್ತು ಏಕೆ?

____________________________________________________________

____________________________________________________________

2) ನೀನೇ ಮಾಧವನಾಗಿದ್ದರೆ ಏನು ಮಾಡುತ್ತಿದ್ದೆ?

____________________________________________________________

____________________________________________________________

3) ಕಥೆಯ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.

____________________________________________________________

____________________________________________________________

____________________________________________________________

LIVEWORKSHEETS